# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006

ಆಡಳಿತ ವಿಭಾಗ

## ಕಛೇರಿ ಆದೇಶ

ವಿಷಯ: ಶ್ರೀ ಎನ್.ಯು. ನಾಗೇಶ್, ದ್ವಿ.ದ.ಗು., ಗ್ರಂಥಾಲಯ ವಿಭಾಗ, ಕರಾಮುವಿ, ಇವರ ಮೇಲೆ ಇಲಾಖಾ ವಿಚಾರಣೆ ನಡೆಸುವುದನ್ನು ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಗೊಳಿಸುವ ಕುರಿತು.

ಉಲ್ಲೇಖ:
1. ಗ್ರಂಥಪಾಲಕರ ಪತ್ರ ಸಂಖ್ಯೆ: ಕರಾಮುವಿ/ಗ್ರಂ.ವಿ 02/2019-20, ದಿನಾಂಕ: 03.02.2020.
2. ಈ ಕಚೇರಿ **"ಷೋಕಾಸ್ ನೋಟಿಸ್"** ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/716/2019-20, ದಿನಾಂಕ: 19.02.2020.
3. ಷೋಕಾಸ್ ನೋಟಿಸ್‌ಗೆ ತಮ್ಮ ಉತ್ತರ ನೀಡಿರುವ ಪತ್ರ ದಿನಾಂಕ: 20.05.2020.
4. ತಮ್ಮ ಮುಚ್ಚಳಿಕೆ ಪತ್ರ ದಿನಾಂಕ: 28.07.2020.
5. ಈ ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/716/2019-20, ದಿನಾಂಕ: 30.07.2020.
6. ಗ್ರಂಥಪಾಲಕರ ಪತ್ರ ಸಂಖ್ಯೆ: ಕರಾಮುವಿ/ಗ್ರಂ.ವಿ 02/2021-22, ದಿನಾಂಕ: 01.04.2022.
7. ಈ ಕಚೇರಿ **"ಷೋಕಾಸ್ ನೋಟಿಸ್"** ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/716/2022-23, ದಿನಾಂಕ: 09.05.2022.
8. ಷೋಕಾಸ್ ನೋಟಿಸ್‌ಗೆ ತಮ್ಮ ಉತ್ತರ ನೀಡಿರುವ ಪತ್ರ ದಿನಾಂಕ: 17.05.2022.
9. ಈ ಕಚೇರಿಯ ಟಿಪ್ಪಣಿ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/716/2019-20, ದಿನಾಂಕ: 25.05.2022.
10. ಗ್ರಂಥಪಾಲಕರ ಪತ್ರ ಸಂಖ್ಯೆ: ಕರಾಮುವಿ/ಗ್ರಂ.ವಿ 02/2021-22, ದಿನಾಂಕ: 25.05.2022.
11. ಈ ಕಚೇರಿ **"ಅಂತಿಮ ಎಚ್ಚರಿಕೆ ನೋಟಿಸ್"** ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/716/2022-23, ದಿನಾಂಕ: 22.09.2022.
12. ಗ್ರಂಥಪಾಲಕರ ಪತ್ರ ಸಂಖ್ಯೆ: ಕರಾಮುವಿ/ಗ್ರಂ.ವಿ/C-01/2023-24, ದಿನಾಂಕ: 12.06.2023.
13. ಈ ಕಚೇರಿ ಆದೇಶ ಸಂಖ್ಯೆ: ಕರಾಮುವಿ/ಆವಿ/ಸಿಬ್ಬಂದಿ-2/716/2023-24, ದಿನಾಂಕ: 02.11.2023
14. ಗ್ರಂಥಪಾಲಕರ ಪತ್ರ ಸಂಖ್ಯೆ: ಕರಾಮುವಿ/ಗ್ರಂ.ವಿ/C-01/2024-25, ದಿನಾಂಕ: 18.04.2024.
15. ಮಾನ್ಯ ಕುಲಪತಿಗಳ ಆದೇಶ ದಿನಾಂಕ: 23.05.2024.

*****

**ಪ್ರಸ್ತಾವನೆ:**

ಶ್ರೀ ಎನ್. ಯು. ನಾಗೇಶ್, ದ್ವಿ.ದ.ಗು., ಗ್ರಂಥಾಲಯ ವಿಭಾಗ, ಕರಾಮುವಿ, ಆದ ನೀವು ಈ ಹಿಂದೆಯೂ ಸಹ ಯಾವುದೇ ರಜೆ ಅರ್ಜಿ ಸಲ್ಲಿಸದೇ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ಕಛೇರಿಗೆ ಅನಧಿಕೃತ ಗೈರುಹಾಜರಿಯಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂಬ ಅರೋಪಗಳ ಕುರಿತು ಶಿಸ್ತು ಪ್ರಾಧಿಕಾರವು ಇಲಾಖಾ ವಿಚಾರಣೆಯನ್ನು ನಡೆಸಿ ಸತ್ಯಾಂಶವನ್ನು ಅರಿಯುವ ದೃಷ್ಟಿಯಿಂದ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿ.ವಿ. ನಿಲಯ ಉದ್ಯೋಗಿಗಳ(ಸಿಸಿಎ) ಪರಿನಿಯಮದ ನಿಯಮ 09 ಮತ್ತು 10 ರಂತೆ ದಿನಾಂಕ: 19.02.2020ರ **"ಷೋಕಾಸ್ ನೋಟಿಸ್"** ಅನ್ನು ನೀಡಲಾಗಿತ್ತು.

ಸದರಿ **"ಷೋಕಾಸ್ ನೋಟಿಸ್"**ಗೆ "ವಿಕಲಚೇತನ ಆದ ನಾನು ಅನಾರೋಗ್ಯದಿಂದಾಗಿ ಅಗಿಂದಾಗ್ಗೆ ಆಸ್ಪತ್ರೆಗೆ ಸೇರುತ್ತಿದ್ದರಿಂದ, ಕೆಲವು ಮಾಹೆಗಳಲ್ಲಿ ಮಧ್ಯಂತರ ದಿನಗಳಲ್ಲಿ ಕಛೇರಿಗೆ ಬರಲು ಸಾಧ್ಯವಾಗದೇ ಗೈರು ಹಾಜರಾಗುತ್ತಿದ್ದರಿಂದಾಗಿ ನನಗೆ "ಷೋಕಾಸ್ ನೋಟಿಸ್" ನೀಡಲಾಗಿದೆ. ನನ್ನ ಮೇಲಿನ ಆಪಾದನೆಗಳನ್ನು ದಯಮಾಡಿ ಮನ್ನಿಸಿ, ಶಿಸ್ತು ಕ್ರಮ



Scanned with OKEN Scanner

ಕೈಗೊಳ್ಳಬೇಡವೆಂದು ನನ್ನ ನಡವಳಿಕೆಯನ್ನು ತಿದ್ದಿಕೊಂಡು ಇನ್ನು ಮುಂದೆ ನಾನು ಕಛೇರಿಗೆ ಗೈರು ಹಾಜರಾಗದೆ, ನಿರಂತರವಾಗಿ ಹಾಜರಾಗುತ್ತೇನೆಂದು" ತಿಳಿಸುತ್ತಾ ದಿನಾಂಕ: 20.05.2020ರಲ್ಲಿ ತಪ್ಪೊಪ್ಪಿಗೆಯೊಂದಿಗೆ ಉತ್ತರ ನೀಡಿರುತ್ತೀರಿ.

ಈ ಸಂಬಂಧ ಮಾನ್ಯ ಕುಲಪತಿಗಳು "Since he is a Physically Challenged Person, he may be Excused by undertaking in an Rs.100/- Stamp paper. That if in future he will not repeat the mistakes again and this is last chance, if he Continue with same type of mistakes he may be terminated as per rules" ಎಂದು ಆದೇಶಿಸಿರುತ್ತಾರೆ.

ಶ್ರೀ ಎನ್. ಯು. ನಾಗೇಶ್, ದ್ವಿ.ದ.ಗು., ಗ್ರಂಥಾಲಯ ವಿಭಾಗ, ಕರಾಮುವಿ, ಆದ ನೀವು ದಿನಾಂಕ:28.07.2020ರಂದು ರೂ.100/-ಗಳ ಮುಖಬೆಲೆಯ ಛಾಪಕಾಗದದಲ್ಲಿ "ನನ್ನ ಆರೋಗ್ಯ ಕಾರಣದಿಂದಾಗಿ ಕಛೇರಿಗೆ ಅಗಿಂದಾಗ್ಗೆ ಗೈರು ಹಾಜರಾಗಿರುತ್ತೇನೆ. ಈ ಸಂಬಂಧ ನೀಡಲಾದ ಷೋಕಾಸ್ ನೋಟಿಸ್‌ಗೆ ದಿನಾಂಕ:20.05.2020ರಂದು ಸಮಜಾಯಿಷಿ ನೀಡಿ ನನ್ನ ತಪ್ಪನ್ನು ಮನ್ನಿಸಬೇಕೆಂದು ಕೋರುತ್ತಾ, ನನ್ನ ನಡವಳಿಕೆಯನ್ನು ತಿದ್ದುಕೊಂಡು ಇನ್ನು ಮುಂದೆ ನಿರಂತರವಾಗಿ ಕೆಲಸಕ್ಕೆ ಹಾಜರಾಗುತ್ತೇನೆ ಎಂಬ ತಪ್ಪೋಪ್ಪಿಗೆಯೊಂದಿಗೆ ಶಿಸ್ತು ಕ್ರಮ ಕೈಗೊಳ್ಳಬಾರದೆಂದು ವಿನಂತಿಸಿಕೊಂಡಿರುತ್ತೀರಿ ಹಾಗೂ ಇನ್ನೂ ಮುಂದೆ ತಪ್ಪುಗಳು ಮರುಕಳಿಸದಂತೆ ಎಚ್ಚರ ವಹಿಸುತ್ತಾ ವಿಶ್ವವಿದ್ಯಾನಿಲಯವು ತೆಗೆದುಕೊಳ್ಳುವ ತೀರ್ಮಾನಗಳಿಗೆ ನಾನು ಬದ್ಧವಾಗಿರುತ್ತೇನೆಂದು" ಮುಚ್ಚಳಿಕೆ ಪತ್ರವನ್ನು ನೀಡಿರುತ್ತೀರಿ.

ತಪ್ಪೋಪ್ಪಿಗೆಯನ್ನು ಆಧರಿಸಿ ರೂ.100/-ಗಳ ಮುಖಬೆಲೆಯ ಛಾಪಕಾಗದದಲ್ಲಿ ಮುಚ್ಚಳಿಕೆ ಪಡೆದು ಇದೇ ಅಂತಿಮವೆಂದು ಎಚ್ಚರಿಕೆ ನೀಡಿ ಕಛೇರಿ ಕರ್ತವ್ಯಕ್ಕೆ ಹಾಜರಾಗಲು ಅನುಮತಿ ನೀಡಿ ದಿನಾಂಕ: 30.07.2020ರ ಆದೇಶ ಹೊರಡಿಸಲಾಗಿರುತ್ತದೆ.

ಆದರೆ ಗ್ರಂಥಪಾಲಕರು, ಮತ್ತೊಮ್ಮೆ ದಿನಾಂಕ:25.05.2022ರ ಪತ್ರದ ಮುಖೇನ ಶ್ರೀ ಎನ್. ಯು. ನಾಗೇಶ್, ದ್ವಿ.ದ.ಗು., ಗ್ರಂಥಾಲಯ ವಿಭಾಗ, ಇವರು ದಿನಾಂಕ:21.02.2022ರಿಂದ ರಿಂದ 01.04.2022ರವರೆಗೂ ಯಾವುದೇ ರಜೆ ಅರ್ಜಿ ಸಲ್ಲಿಸದೇ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ಕಛೇರಿಗೆ ಅನಧಿಕೃತ ಗೈರು ಹಾಜರಾಗಿರುತ್ತಾರೆಂದು ತಿಳಿಸಿದ ಹಿನ್ನೆಲೆಯಲ್ಲಿ ದಿನಾಂಕ:09.05.2022ರಂದು **"ಷೋಕಾಸ್ ನೋಟಿಸ್"** ನೀಡಲಾಗಿರುತ್ತದೆ.

ಶ್ರೀ ಎನ್. ಯು. ನಾಗೇಶ್, ದ್ವಿ.ದ.ಗು., ಗ್ರಂಥಾಲಯ ವಿಭಾಗ, ಕರಾಮುವಿ, ಆದ ನೀವು ಸದರಿ ನೋಟಿಸ್‌ಗೆ ದಿನಾಂಕ:17.05.2022ರಂದು ಲಿಖಿತ ಹೇಳಿಕೆಯಲ್ಲಿ "ನನ್ನ ಸ್ವಯಂಕೃತ ಅಪರಾಧವನ್ನು ಅಂತಿಮವಾಗಿ ಮನ್ನಿಸಿ, ನನ್ನ ಸೇವಾಅವಧಿಯು ಕಡಿಮೆ ಇದ್ದು, ಜುಲೈ-2028ರಂದು ನಿವೃತ್ತಿ ಹೊಂದಲಿದ್ದು, ಇನ್ನು ಮುಂದೆ ನನ್ನಿಂದ ತಪ್ಪುಗಳು ಮರುಕಳಿಸದಂತೆ ಎಚ್ಚರವಹಿಸುತ್ತಾ, ಕಛೇರಿಗೆ ನಿರಂತರವಾಗಿ ಹಾಜರಾಗುತ್ತೇನೆ, ಮತ್ತೋಮ್ಮೆ ಕಛೇರಿಗೆ ಅನಧಿಕೃತ ಗೈರುಹಾಜರಾದಲ್ಲಿ ನಾನೇ ಸ್ವಯಂ ಪ್ರೇರಿತ ನಿವೃತ್ತಿ ಪಡೆಯುತ್ತೇನೆ"ಎಂದು ತಿಳಿಸಿರುತ್ತೀರಿ.



Scanned with OKEN Scanner

ಈ ಸಂಬಂಧ ವಿಶ್ವವಿದ್ಯಾನಿಲಯವು ದಿನಾಂಕ:22.09.2022ರಂದು "ಅಂತಿಮ ಎಚ್ಚರಿಕೆ ನೋಟಿಸ್" ಜಾರಿ ಮಾಡಿ ಅನಧಿಕೃತ ಗೈರಾಗದಂತೆ ಹಾಗೂ ದುರ್ನಡತೆಯನ್ನು ಎಸಗದಂತೆ ಅಂತಿಮ ಎಚ್ಚರಿಕೆ ನೀಡಲಾಗಿರುತ್ತದೆ.

ವಿಶ್ವವಿದ್ಯಾನಿಲಯದ "ಅಂತಿಮ ಎಚ್ಚರಿಕೆ ನೋಟಿಸ್" ಅನ್ನು ಸಹ ಲೆಕ್ಕಿಸದೇ ಪುನಃ ದಿನಾಂಕ: 29.05.2023 ರಿಂದ 12.06.2023 ರವರಗೆ ಯಾವುದೇ ರಜೆ ಅರ್ಜಿ ಸಲ್ಲಿಸದೇ ಮೇಲಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ಕಛೇರಿಗೆ ಅನಧಿಕೃತ ಗೈರು ಹಾಜರಾಗಿರುತ್ತಾರೆ. ಇದರಿಂದ ಕಛೇರಿಯ ದೈನಂದಿನ ಕೆಲಸ ಕಾರ್ಯಗಳಿಗೆ ಅಡಚಣೆಯಾಗಿದೆ ಎಂದು ದಿನಾಂಕ: 12.06.2023 ರ ಪತ್ರದಲ್ಲಿ ಗ್ರಂಥಪಾಲಕರು ತಿಳಿಸಿರುತ್ತಾರೆ.

ಶ್ರೀ ಎನ್. ಯು. ನಾಗೇಶ್, ದ್ವಿ.ದ.ಗು., ಗ್ರಂಥಾಲಯ ವಿಭಾಗ, ಕರಾಮುವಿ, ಆದ ನಿಮ್ಮ ನಡವಳಿಕೆಯಲ್ಲಿ ಯಾವುದೇ ಸುದಾರಣೆ ಇಲ್ಲದೇ ಇರುವುದು ಕಂಡುಬಂದಿದ್ದು, ನಿಮ್ಮ ಅನಧಿಕೃತ ಗೈರುಹಾಜರಿ, ದುರ್ನಡತೆ ಮತ್ತು ಕರ್ತವ್ಯಲೋಪ ಕಛೇರಿಯ ಸಭ್ಯತೆಯನ್ನು ಕಾಪಾಡುವಲ್ಲಿ ಸಂಪೂರ್ಣ ವಿಫಲಗೊಂಡ ಹಿನ್ನೆಲೆಯಲ್ಲಿ, "ಅಂತಿಮ ಎಚ್ಚರಿಕೆಯ ನೋಟಿಸ್" ಅನ್ನು ನೀಡಲಾಗಿದ್ದರೂ ನಡವಳಿಕೆಯಲ್ಲಿ ಯಾವುದೇ ಬದಲಾವಣೆಗಳು ಕಂಡುಬಂದಿಲ್ಲದಿರುವುದರಿಂದ ಪ್ರಸ್ತುತ ಮೈಸೂರು ವಿ.ವಿ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ 6(1)(2)(3)ರ ಪ್ರಕಾರ ಮಾನ್ಯ ಕುಲಪತಿಗಳಿಗೆ ಪ್ರದತ್ತವಾದ ಅಧಿಕಾರದನ್ವಯ ಸದರಿ ಪರಿನಿಯಮದ ನಿಯಮ 6(1)(i i i )ರ ರೀತ್ಯ ಮೂರು ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ಪರಿಣಾಮವಿಲ್ಲದೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಿ ದಿನಾಂಕ: 02.11.2023ರಂದು ಆದೇಶ ಹೊರಡಿಸಲಾಗಿರುತ್ತದೆ.

ಮುಂದುವರಿದಂತೆ, ಗ್ರಂಥಪಾಲಕರು, ದಿನಾಂಕ: 18.04.2024ರಂದು ಪತ್ರದಲ್ಲಿ ಶ್ರೀ ಎನ್. ಯು. ನಾಗೇಶ್, ದ್ವಿ.ದ.ಗು., ಗ್ರಂಥಾಲಯ ವಿಭಾಗ, ಇವರು ದಿನಾಂಕ:28.03.2024ರಿಂದ ಕಛೇರಿಗೆ ಅನಧಿಕೃತ ಗೈರು ಹಾಜರಾಗಿರುತ್ತಾರೆಂದು ತಿಳಿಸಿರುವ ಹಿನ್ನೆಲೆಯಲ್ಲಿ ಶ್ರೀ ಎನ್. ಯು. ನಾಗೇಶ್, ದ್ವಿ.ದ.ಗು., ಇವರು ಕಛೇರಿಯ ಸಭ್ಯತೆಯನ್ನು ಕಾಪಾಡುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದ್ದು, ಅಶಿಸ್ತಿನ ನಡವಳಿಕೆ ಮುಂದುವರಿದಿರುತ್ತದೆ ಹಾಗೂ ದುರ್ನಡತೆಯಾಗಿದ್ದು, ವಿಶ್ವವಿದ್ಯಾನಿಲಯದ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿ ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ವರ್ತನೆ) ಪರಿನಿಯಮದ ನಿಯಮ - 3 ಅನ್ನು ಉಲ್ಲಂಘಿಸಿದಂತಾಗಿರುತ್ತದೆ.

ಪ್ರಸ್ತುತ ಸದರಿ ನೌಕರರ ದಂಡನಾವಧಿಯು ಚಾಲ್ತಿಯಲ್ಲಿದ್ದು, ಪುನಃ ಕಛೇರಿಗೆ ಗೈರಾಗುವ ಮೂಲಕ ವಿಶ್ವವಿದ್ಯಾನಿಲಯವು ವಿಧಿಸಿದ ದಂಡನೆಯನ್ನು ಲೆಕ್ಕಿಸದೇ ಧಿಕ್ಕರಿಸಿರುವುದು ತಮ್ಮ ಅಶಿಸ್ತಿನ ನಡವಳಿಕೆಯನ್ನು ಮುಂದುವರಿಸಿದಂತಾಗಿರುತ್ತದೆ. ನೌಕರನ ಸಭ್ಯತೆಯನ್ನು ಕಾಪಾಡುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿದ್ದು, ಕಛೇರಿಗೆ ಅನಧಿಕೃತ ಗೈರಾಗುವ ಮೂಲಕ ದುರ್ನಡತೆ ಮುಂದುವರೆಸಿರುವುದು ಕರ್ತವ್ಯಲೋಪವಾಗಿರುವುದರಿಂದ ಸದರಿಯವರ ಮೇಲೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ -7(1)(a) ರನ್ವಯ ತಕ್ಷಣದಿಂದ ಜಾರಿಗೆ ಬಂದಂತೆ ಸೇವೆಯಿಂದ ಅಮಾನತ್ತುಗೊಳಿಸಲು ಶಿಸ್ತು ಪ್ರಾಧಿಕಾರವೂ ಆದ ಮಾನ್ಯ ಕುಲಪತಿಗಳು ಆದೇಶಿಸಿರುವ ಹಿನ್ನೆಲೆಯಲ್ಲಿ ಈ ಆದೇಶ ಹೊರಡಿಸಿದೆ.



Scanned with OKEN Scanner

ಸಂಖ್ಯೆ:ಕರಾಮುವಿ/ಆವಿ/ಸಿಬ್ಬಂದಿ-2/716/2024-25,ದಿನಾಂಕ:31.05.2024

ಮೇಲಿನ ಪ್ರಸ್ತಾವನೆಗೊಳಪಟ್ಟು, ಶಿಸ್ತುಪ್ರಾಧಿಕಾರದ ಆದೇಶದ ಮೇರೆಗೆ, ಶ್ರೀ ಎನ್.ಯು.ನಾಗೇಶ್, ದ್ವಿ.ದ.ಗು, ಗ್ರಂಥಾಲಯ ವಿಭಾಗ, ಕರಾಮುವಿ, ಇವರ ದಂಡನಾವಧಿಯು ಚಾಲ್ತಿಯಲ್ಲಿದ್ದರೂ ಸಹ ಕಛೇರಿಗೆ ಗೈರಾಗುವ ಮೂಲಕ ವಿಶ್ವವಿದ್ಯಾನಿಲಯವು ವಿಧಿಸಿದ ದಂಡನೆಯನ್ನು ಲೆಕ್ಕಿಸದೇ ಧಿಕ್ಕರಿಸಿರುವುದು ತಮ್ಮ ಅಶಿಸ್ತಿನ ನಡವಳಿಕೆ ದುರ್ನಡತೆಯಾಗಿರುತ್ತದೆ. ವಿಶ್ವವಿದ್ಯಾನಿಲಯದ ನೌಕರನ ಸಭ್ಯತೆಯನ್ನು ಕಾಪಾಡುವಲ್ಲಿ ಸಂಪೂರ್ಣವಾಗಿ ವಿಫಲಗೊಂಡಿರುವ ಹಿನ್ನೆಲೆಯಲ್ಲಿ ಕಛೇರಿಗೆ ಅನಧಿಕೃತ ಗೈರಾಗುವ ಮೂಲಕ ದುರ್ನಡತೆ ಮುಂದುವರೆಸಿರುವುದು ಕರ್ತವ್ಯಲೋಪವಾಗಿರುವುದರಿಂದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ವಿಶ್ವವಿದ್ಯಾನಿಲಯವು ಅಳವಡಿಸಿಕೊಂಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ (ಸಿಸಿಎ) ಪರಿನಿಯಮದ ನಿಯಮ -7(1)(a) ರನ್ವಯ ತಕ್ಷಣದಿಂದ ಜಾರಿಗೆ ಬಂದಂತೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಲಾಗಿದೆ.

ಶಿಸ್ತು ಪ್ರಾಧಿಕಾರದ ಆದೇಶದ ಮೇರೆಗೆ,

03/06/2024

ಕುಲಸಚಿವ

ಗೆ,

ಶ್ರೀ ಎನ್.ಯು.ನಾಗೇಶ್, 1ನೇ ಮುಖ್ಯರಸ್ತೆ, 7ನೇ ಅಡ್ಡರಸ್ತೆ, ಸರಸ್ವತಿಪುರಂ, ಮೈಸೂರು.

ಪ್ರತಿ:

1. ಗ್ರಂಥಪಾಲಕರು, ಗ್ರಂಥಾಲಯ ವಿಭಾಗ, ಕರಾಮುವಿ, ಮೈಸೂರು, ಇವರಿಗೆ – ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
3. ಉಪಕುಲಸಚಿವ,ಆಡಳಿತ/ಕಾನೂನು ಘಟಕ, ಕರಾಮುವಿ, ಮೈಸೂರು ಇವರಿಗೆ - ಮುಂದಿನ ಸೂಕ್ತ ಕ್ರಮಕ್ಕಾಗಿ.
4. ಕಾರ್ಯನಿರ್ವಾಹಕರು, ಸಿಬ್ಬಂದಿ ಶಾಖೆ-2, ಆಡಳಿತ ವಿಭಾಗ, ಕರಾಮುವಿ, ಮೈಸೂರು ಇವರಿಗೆ – ಈ ಮಾಹಿತಿಯನ್ನು ಸದರಿಯವರ ಸೇವಾ ಪುಸ್ತಕದಲ್ಲಿ ಕಡ್ಡಾಯವಾಗಿ ದಾಖಲಿಸಲು ಸೂಚಿಸಿದೆ.
5. ಮಾನ್ಯ ಕುಲಪತಿಗಳ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
6. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
7. ಕಚೇರಿ ಪ್ರತಿ/ಸಂಬಂಧಿಸಿದ ಕಡತಕ್ಕೆ.
8. ನೋಡಲ್ ಆಫೀಸರ್, ಕರಾಮುವಿ ಅಂತರ್ಜಾಲ



Scanned with OKEN Scanner